ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ 1274/2024
ಚಾ. ಸಾ 09
ಪ್ರಾ.ಸಾ 08

| | | |
|---|---|---|
| ಸಾಕ್ಷಿದಾರರ ಹೆಸರು | : | ವನಿತಾ |
| ತಂದೆಯ ಹೆಸರು | : | ಚಂದ್ರಶೇಖರ್ |
| ವಯಸ್ಸು | : | 57 |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಕಲ್ಯಾಣಪುರ |

ದಿನಾಂಕಃ 21-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ಆರೋಪಿತರ ಪರಿಚಯ ಇದೆ. ಚಾಸಾ 2 ರಿಂದ 4 , ಚಾಸಾ 10 ರಿಂದ 13 ರವರ ಪರಿಚಯ ಇದೆ. 2004-05 ಸಾಲಿನಲ್ಲಿ ಪಂಚಾಯತ್ ನಿಂದ ರಸ್ತೆ ಮಾಡಿಕೊಟ್ಟಿದ್ದರು . ನಾವು ಆ ರಸ್ತೆಯಲ್ಲಿ ಓಡಾಡುತಿದ್ದೆವು . 2007-08 ರಿಂದ ಆರೋಪಿಗಳು ಆ ರಸ್ತೆಯಲ್ಲಿ ಓಡಾಡದಂತೆ ತಕರಾರು ಮಾಡಿರುತಾರೆ. ದಿ. 02-10-2021 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಕೋಟೆ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಂಡಿದ್ದೆವು ಆ ಸಮಯದಲ್ಲಿ ಗಲಾಟೆ ಆಗಿದ್ದವು. ಆ ಸಮಯದಲ್ಲಿ ಚಾಸಾ 1, ಚಾಸಾ 5 , ಚಾಸಾ 8 ಹಾಗೂ ಸುಮಾರು ಜನರು ಅಲ್ಲಿ ಇದ್ದರು. ನಾವು ಸ್ವಚ್ಛತಾ ಕಾರ್ಯವನ್ನು ಮಾಡುತ್ತಾ ಮುಂದೆ ಸಾಗುತಿದ್ದೆವು ಆರೋಪಿತರ ಮನೆಯ ಮುಂದೆ ಸ್ವಚ್ಛತಾ ಕಾರ್ಯವನ್ನು ಮಾಡಲು ಮುಂದಾದಾಗ ಅರೋಪಿತರು ನಮ್ಮ ಕೆಲಸಕ್ಕೆ ಅಡ್ಡಿ ಪಡಿಸಿದರು . ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು . ಪೈಪ್ ಹಾಗೂ ರಾಡ್ ನ್ನು ಹಿಡಿದುಕೊಂಡು ಹೊಡೆಯಲು ಮುಂದಾದರು . ನಾವು ಮಣ್ಣು ಹಾಕಿದ್ದ ಸ್ಥಳಕ್ಕೆ ನೀರು ಬಿಟ್ಟು ಕೆಲಸ ಮಾಡದಂತೆ ಮಾಡಿದರು. ನಮಗೆ ಕೆಲಸ ಮಾಡಲು ಬಿಡದೇ ಇದ್ದಲ್ಲಿ ನಾವು ಪೊಲೀಸ್ ನವರಿಗೆ ದೂರು ನೀಡುತ್ತೇವೆ ಎಂದು ತಿಳಿಸಿದೆವು ಆದರೂ ಅವರು ಕೆಲಸ ಮಾಡಲು ಬಿಡಲಿಲ್ಲ. ಚಾಸಾ 1 ರವರು ಈ ವಿಚಾರವಾಗಿ ದೂರು ನೀಡಿದರು . ನಮಗೆ ಅವಾಚ್ಯ ಶಬ್ದಗಳಿಂದ ಬೈದು ನಮ್ಮನ್ನು ಅಡ್ಡಕಟ್ಟಿ ಕೆಲಸಕ್ಕೆ ಅಡ್ಡಿಪಡಿಸಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಇದ್ದು ಒಬ್ಬರು

ಆರೋಪಿಯವರು ಇರುವುದಿಲ್ಲ. ನ್ಯಾಯಾಲಯದ ಮುಂದೆ ನಾಗರಾಜುರವರ ಹೆಂಡತಿರವರಾದ ಸುಪ್ರೀತಾ ರವರು ಇರುವುದಿಲ್ಲ . 2 ನೇ ಆರೋಪಿಯವರ ಪರ ವಕೀಲರು ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿಯವರ ಗುರುತಿಸುವಿಕೆಯ ಬಗ್ಗೆ ಆಕ್ಷೇಪ ಮಾಡಿರುವುದಿಲ್ಲ .

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ವಿ.ಪಿ ವಕೀಲರಿಂದಃ**

ಪಂಚಾಯತ್ ನಿಂದ ಎಷ್ಟು ಅನುದಾನ ರಸ್ತೆ ಮಾಡಲು ಬಿಡುಗಡೆ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಹೇಳಿದ ರಸ್ತೆ ಸುಂಕದಕಟ್ಟೆ ಗಣಪತಿ ದೇವಸ್ಥಾನದಿಂದ ಹಿಡಬಳ್ಳಿ ರಸ್ತೆಗೆ ಸಂಪರ್ಕವನ್ನು ಕಲ್ಪಿಸುತ್ತದೆ . ಗಾಂಧಿ ಜಯಂತಿ ದಿನ ಕೆಲಸದವರು 5 ಜನ ಮತ್ತು ಇತರೇ 20 ರಿಂದ 25 ಜನ ಸೇರಿದ್ದರು . ಆ ದಿನ ನನ್ನ ಪ್ರಕಾರ ಬೆಳಿಗ್ಗೆ 8.30 ಕ್ಕೆ ಕೆಲಸ ಪ್ರಾರಂಭ ಆಯಿತು . ಆ ದಿನ ನಾವು ಅರ್ದ ಕಿಲೋ ಮೀ ನಷ್ಟು ರಸ್ತೆ ಕೆಲಸ ಮಾಡಿರುತ್ತೇವೆ. ಅದು ಪಂಚಾಯತ್ ರಸ್ತೆ ಆಗಿರುತ್ತದೆ. ಪಂಚಾಯತ್ ರಸ್ತೆ ಎಂದು ಯಾವ ಆದಾರದ ಮೇಲೆ ಹೇಳುತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪಂಚಾಯತ್‌ನವರೇ ಆ ರಸ್ತೆಯನ್ನು ಮಾಡಿಕೊಟ್ಟಿದ್ದರಿಂದ ಪಂಚಾಯತ್ ರಸ್ತೆ ಎಂದು ಹೇಳುತಿದ್ದೇನೆ. ಪಂಚಾಯತ್ ರಸ್ತೆ ಯಾವ ಸರ್ವೇ ನಂಬರ್ ನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಪಂಚಾಯತ್ ನವರಿಗೆ ಆ ಜಾಗವನ್ನುಯಾರು ಬಿಟ್ಟು ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆದಿ ಕಾಲದಿಂದಲೂ ಅದೇ ಜಾಗದಲ್ಲಿ ಓಡಾಡುತಿದ್ದರು ಎಂದು ತಿಳಿಸಿರುತ್ತಾರೆ . ಆ ದಿನ ನಮ್ಮ ಮನೆಯಿಂದ ರಾಮಚಂದ್ರ ರವರ ಮನೆಯವರೆಗೆ ಕೆಲಸ ಆಯಿತು . ಅದು 7 ಅಡಿ ಅಗಲದ ರಸ್ತೆ . ಪಂಚಾಯತ್ ರಸ್ತೆ ಎನ್ನುವ ಬಗ್ಗೆ ನಾನು ದಾಖಲೆಯನ್ನು ನೋಡಿರುತ್ತೇನೆ . ಪಂಚಾಯತ್ ನಲ್ಲಿ ಇಟ್ಟಿದ್ದ ನಮ್ಮಊರಿನವರು ಸಹಿ ಮಾಡಿದ ದಾಖಲೆಯನ್ನು ನೋಡಿ ಸದ್ರಿ ರಸ್ತೆ ಪಂಚಾಯತ್ ರಸ್ತೆ ಎಂದು ಹೇಳುತಿದ್ದೇನೆ . ಆ ದಿನ ರಸ್ತೆಯಲ್ಲಿ ಕೆಲಸ ಮಾಡಲು ನಾವು ಪಂಚಾಯತ್ ನಿಂದ ಅನುಮತಿ ಪಡೆದಿದ್ದೇವೆ . ನಾವು ಕೆಲಸ ಮಾಡಲು ಯಾವಾಗ ಅನುಮತಿ ಪಡೆದೆವು ಎಂದ ನೆನಪಿಲ್ಲ. ಅನುಮತಿ ಪಡೆದ ಬಗ್ಗೆ ಪೊಲೀಸ್ ನವರಿಗೆ ತಿಳಿಸಿಲ್ಲ . ಅಲ್ಲಿ ಸಾರ್ವಜನಿಕ ರಸ್ತೆ ಇಲ್ಲದೇ ಇದ್ದುದರಿಂದ ನಾವು ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ . ಆ ದಿನ ಪೊಲೀಸರು ಸ್ಥಳಕ್ಕೆ ಮದ್ಯಾಹ್ನ 3.00 ಗಂಟೆಗೆ ಬಂದಿರುತ್ತಾರೆ . ಆ ದಿನ ಪೊಲೀಸರು

ನನ್ನನ್ನು ವಿಚಾರಣೆ ಮಾಡಿಲ್ಲ . ಪೊಲೀಸರು ವಿಚಾರಣೆ ಮಾಡಿದಾಗ ಯಾರ ಯಾರ ನಡುವೆ ಏನು ಏನು ಆಗಿತ್ತು ಎಂದು ಹೇಳಿದ್ದೇನೆ. ಆ ಸ್ವಿರಾಸ್ತಿಯ ಮೇಲೆ ಯಾವುದೇ ಸಿವಿಲ್ ವ್ಯಾಜ್ಯ ಇರಲಿಲ್ಲ . ಪೊಲೀಸರಿಗೆ ನಾನು ಕೊಟ್ಟ ಹೇಳಿಕೆಯಲ್ಲಿ ಸದ್ರಿ ಸ್ವತ್ತಿನ ಮೇಲೆ ಸಿವಿಲ್ ವ್ಯಾಜ್ಯ ಇತ್ತು ಎಂದು ಹೇಳಲಿಲ್ಲ. ನನ್ನ ಗಂಡ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡಿರುತ್ತಾರೆ ಎಂದರೆ ಸರಿ. ಚಾಸಾ 10 ಮತ್ತು 3 ನನ್ನ ಸಹೋದರ ಮತ್ತು ಸಹೋದರಿ ಎಂದರೆ ಸರಿ. ರಸ್ತೆ ಮಾಡಿರುವ ಜಾಗದ ದಾಖಲೆಯನ್ನು ನಾನು ಪರಿಶೀಲನೆ ಮಾಡಿದ್ದೇನೆ . ಅಸಲು ದಾವಾ ಸಂಖ್ಯೆ 679/2020 ರಲ್ಲಿ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ 24-05-2021 ರಂದು ಸದ್ರಿ ಸ್ವಿರಾಸ್ತಿಗೆ ಯಾರು ಅಕ್ರಮ ಪ್ರವೇಶ ಮಾಡಬಾರದು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಾವು ರಸ್ತೆ ಮಾಡುವ ಮೊದಲೇ ಸದ್ರಿ ಜಾಗಕ್ಕೆ ನಿರ್ಬಂದಕಾಜ್ಞೆ ಆದೇಶ ಆಗಿತ್ತು ಎಂದರೆ ಸಾಕ್ಷಿ ನಾವು ಆ ಸ್ಥಳಕ್ಕೆ ಹೋಗಿಲ್ಲ ಎಂದು ತಿಳಿಸಿರುತ್ತಾರೆ . ಸದ್ರಿ ಸ್ವತ್ತು ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಪಂಚಾಯತ್ ಅನುದಾನ ಕೊಟ್ಟ ನಂತರ ಸದ್ರಿ ರಸ್ತೆ ಅರ್ದ ರಸ್ತೆ ಕಾಂಕ್ರೀಟ್ ರಸ್ತೆ ಆಗಿತ್ತು . ರಸ್ತೆ ಮಾಡಿರುವ ಜಾಗ ಆರೋಪಿತರಿಗೆ ಸೇರಿರುವುದರಿಂದ ಸದ್ರಿ ಸ್ವತ್ತು ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರು ಅರ್ಧ ಗಂಟೆ ವರೆಗೆ ಸ್ಥಳದಲ್ಲಿ ಇದ್ದರು . ಅದೇ ದಿನ ನಾನು ಮಲ್ಪೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ . ಆಗ ಪೊಲೀಸಿನವರು ನನ್ನ ಜೊತೆ ಮಾತನಾಡಿರುತ್ತಾರೆ . ಘಟನೆ ದಿನ ಪೊಲೀಸರು ರಸ್ತೆ ಬಗ್ಗೆ ವಿಚಾರಿಸಿರುತ್ತಾರೆ ತದನಂತರ ಪುನಃ 4 ನೇ ತಾರೀಖು ನಾವು ಹೋದಾಗ ಹೇಳಿಕೆ ಮಾಡಿರುತ್ತಾರೆ. 4 ನೇ ತಾರೀಖು ನಾನು ಸಹಿ ಮಾಡಿರುತೇನೆ. ನಾನು ಒಂದೇ ಸಹಿ ಮಾಡಿರುತ್ತೇನೆ . ಸದ್ರಿ ಜಾಗದಲ್ಲಿ ವಿವಾದಿತ ರಸ್ತೆ ಇಲ್ಲ ಎಂದರೆ ಸರಿಯಲ್ಲ . ನಾನು ನಮ್ಮ ಸಂಬಂಧಿಕರು ಸೇರಿ ಸುಳ್ಳು ಪ್ರಕರಣವನುನ ಆರೋಪಿತರ ವಿರುದ್ದ ದಾಖಲೆ ಮಾಡಿದ್ದೇವೆ ಎಂದರೆ ಸರಿಯಲ್ಲ . ನಾವು ಆರೋಪಿತರಿಗೆ ಸೇರಿದ ಜಾಗದಲ್ಲಿ ರಸ್ತೆ ಮಾಡಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ . ನಮ್ಮ ಕೈಯಲ್ಲಿ ಆ ದಿನ ಮಾರಕ ಆಯುಧ ಇರಲಿಲ್ಲ , 5 ಜನ ಕೆಲಸದವರ ಕೈಯಲ್ಲಿ ಮಾರಕ ಆಯುಧ ಇರಲಿಲ್ಲ ಒಬ್ಬರ ಬಳಿ ಇತ್ತು . ಒಬ್ಬರ ಕೈಯಲ್ಲಿ ಕತ್ತಿ ಇತ್ತು ಎನ್ನುವ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನಾ ಎಂದು

ನನಗೆ ನೆನಪಿಲ್ಲ .ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನಾವು ಕಟ್ಟು ಕತೆ ಕಟ್ಟುತಿದ್ದೇವೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.